ಆ) ಈ ದುಬಾರಿ ಬಡ್ಡಿಯಿಂದಾಗಲೆ ರೈತರು ವಿದ್ಯುಚ್ಛಕ್ತಿ ಮಂಡಳಿಗೆ ಸುಸ್ತಿದಾರರಾಗಿದ್ದು ವಿದ್ಯುಚ್ಛಕ್ತಿ ಮಂಡಳಿಯವರು ಸಾವಿರಾರು ಮಂದಿ ರೈತರನ್ನು ನ್ಯಾಯಾಲಯಕ್ಕೆ ಎಳೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಇ) 1990 ಆಕ್ಟೋಬರ್ ತಿಂಗಳಿಗೆ ಹಿಂದೆ ನೀರಾವರಿ ಪಂಪುಸೆಟ್ಟುಗಳ ಬಾಬ್ತು ಬಾಕಿ ಇರುವ ಮೊತ್ತದಲ್ಲಿ ಪೂರ್ಣ ಬಡ್ಡಿಯನ್ನು ಮನ್ನಾ ಮಾಡಿ ಬಾಕಿಯಿರುವ ದರವನ್ನು ಮಾತ್ರ ಸಂದಾಯ ಮಾಡಲು ಸರ್ಕಾರ ಅವಕಾಶ ಮಾಡಿ ಕೊಡುವುದೆ?

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು) :

ಅ) ನಿಗದಿತ ಸಮಯದಲ್ಲಿ ಬಳಕೆಯ ಬಾಬ್ತು ಹಣವನ್ನು ಪಾವತಿ ಮಾಡದಿದ್ದಲ್ಲಿ ಮಾಹೆಯಾನ ಶೇ. 2ರಷ್ಟು ಸರಳ ಬಡ್ಡಿಯನ್ನು ವಿಧಿಸಲಾಗುವುದು.

ಆ) ಬಾಕಿ ವಸೂಲಿಗಾಗಿ ಮಂಡಳಿಯು ಮೊದಲು 'ಎ' ಮತ್ತು 'ಬಿ' ಫಾರಂಗಳನ್ನು ಬಾಕಿದಾರ ಬಳಕೆದಾರರಿಗೆ ನೀಡುತ್ತದೆ. ಬಳಕೆದಾರರು ಬಾಕಿಯನ್ನು ತೀರಿಸದಿದ್ದಲ್ಲಿ ಅದಕ್ಕೆ 'ಸಿ' ಫಾರಂ ನೀಡಿ ಭೂಕಂದಾಯದ ಬಾಕಿ ಎಂದು ಪರಿಗಣಿಸಿ ವಸೂಲಿ ಮಾಡಲು ಕ್ರಮ ತೆಗೆದುಕೊಳ್ಳಲಾಗುವುದು. ಬಾಕಿ ವಸೂಲಿಗಾಗಿ ವಿದ್ಯುತ್ ಮಂಡಳಿ ಗ್ರಾಹಕರನ್ನು ನ್ಯಾಯಾಲಯಕ್ಕೆ ಎಳೆಯುವ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಪ್ರಸ್ತುತ ಮಂಡಳಿಯು ನಿಯಮಾವಳಿಗಳಲ್ಲಿ ಬಡ್ಡಿಯನ್ನು ಮನ್ನಾ ಮಾಡುವ ಅವಕಾಶ ಇರುವುದಿಲ್ಲ.

ಚಿತ್ರದುರ್ಗದಲ್ಲಿ ಮೀನು ಮಾರುಕಟ್ಟೆ ಬಗ್ಗೆ.

1383 - ಶ್ರೀ ಎನ್.ಜಿ. ನಾಯಕ್ (ಮೊಳಕಾಲ್ಮೂರು) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಚಿತ್ರದುರ್ಗದಲ್ಲಿ ಮೀನು ಮಾರುಕಟ್ಟೆಯನ್ನು ನಿರ್ಮಿಸುವ ಸಲಹೆ ಇದೆಯೇ?

ಆ) ಹಾಗಿದ್ದಲ್ಲಿ, ಅದು ಯಾವ ಹಂತದಲ್ಲಿದೆ? ಹಾಗೂ

ಇ) ಈ ಬಗ್ಗೆ ಎಷ್ಟು ಹಣ ಖರ್ಚಾಗುವುದು?

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು) :

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಹಾಸನದ ಕಿಂಕೋ ಫ್ಯಾಕ್ಟರಿಗೆ ಹೂಡಿರುವ ಬಂಡವಾಳ.

1469 - ಶ್ರೀ ಕೆ.ಎಚ್. ಹನುಮೇಗೌಡ (ಹಾಸನ): ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹಾಸನ ನಗರದಲ್ಲಿನ ಕಿಂಕೋ ಫ್ಯಾಕ್ಟರಿಗೆ ಸರ್ಕಾರ ಎಷ್ಟು ಬಂಡವಾಳ ಹೂಡಿದೆ?

ಆ) ಕಳೆದ ಮೂರು ವರ್ಷಗಳಿಂದ ವರ್ಷವೊಂದಕ್ಕೆ ನಷ್ಟ ಅನುಭವಿಸಿದ ಮೊತ್ತ ಎಷ್ಟು?

ಇ) ಈ ಕಾರ್ಖಾನೆಯು ಈ ರೀತಿ ನಷ್ಟ ಅನುಭವಿಸಲು ಕಾರಣಗಳೇನು?

ಈ) ಈ ಕಾರ್ಖಾನೆಯು ಲಾಭದಾಯಕವಾಗಿ ನಡೆಯಲು ಸರ್ಕಾರ ಏನು ಕಾರ್ಯಕ್ರಮ ತೆಗೆದುಕೊಳ್ಳಲಿದೆ?

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು) :